ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರ ಪರವಾಗಿ)

1956ರ ಕಂಪನಿ ಅಧಿನಿಯಮ 619(ಎ)ರ ಪ್ರಕರಣದ ಮೇರೆಗೆ:

1. ಶ್ರೀ ಕಂಠೀರವ ಸ್ಟುಡಿಯೋ ನಿಯಮಿತದ 2013–14ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ). ಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

6. ವರದಿಯನ್ನೊಪ್ಪಿಸುವುದು

ಶ್ರೀ ಶಕುಂತಲಾ ಟಿ. ಶೆಟ್ಟಿ [ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ]:– ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಮಂಡಲದ 2014–15ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಇಪ್ಪತ್ತೊಂಬತ್ತನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಮಂಡಿಸಲಾಯಿತು)

ಅಧ್ಯಕ್ಷರು:– ಈಗ ನಿಯಮ 69ರ ಪ್ರಕಾರ ಚರ್ಚೆ ಮಾಡುವುದು, ಈಗ ಶ್ರೀಮಾನ್ ಜಗದೀಶ್ ಶೆಟ್ಟರ್ ಅವರು ಮಾತನಾಡುವುದು.

[ಗೊಂದಲ]

ಶ್ರೀ ಆರ್ ಅಶೋಕ್:– ದಯವಿಟ್ಟು ನಿಯಮ 60ರ ಅಡಿಯಲ್ಲೇ ಚರ್ಚೆಗೆ ಅವಕಾಶ ಕೊಡಬೇಕು, ಬೇರೆಯದರ ಅಡಿಯಲ್ಲಿ ನಾವು ಚರ್ಚೆ ಮಾಡುವುದಿಲ್ಲ, ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಮಾಡಿಕೊಡುವುದು.

ಶ್ರೀ ಜಗದೀಶ್ ಶೆಟ್ಟರ್ [ವಿರೋಧಪಕ್ಷದ ನಾಯಕರು]:– ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆ ಪ್ರಕಾರ ಚರ್ಚೆ ಮಾಡುತ್ತೇವೆ, ನಾವು ನಿಯಮ 60ರ ಪ್ರಕಾರ ಚರ್ಚೆ ಮಾಡುತ್ತೇವೆ. ಸರ್ಕಾರ ಇಷ್ಟೊಂದು adamant ಆದರೆ ರೂಲ್ 60 ಪ್ರಕಾರ ನಾವು ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು:– ಮಾನ್ಯ ವಿರೋಧಪಕ್ಷದ ನಾಯಕರೆ, ನಾನು ನಿಯಮ 69ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ, ದಯವಿಟ್ಟು ಚರ್ಚೆ ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್:– ರೂಲ್ 60 ಪ್ರಕಾರ ನಾವು ಚರ್ಚೆ ಮಡುತ್ತೇವೆ allow ಮಾಡಿ, ಇವರು ಇಷ್ಟು adamant ಮಾಡಿ, Question Hour ಅನ್ನು ಹಾಳು ಮಾಡಿ, ಇವರು ಏನು ಚರ್ಚೆ ಮಾಡಿದರೂ, Question Hour ಇಲ್ಲ ಏನೂ ಇಲ್ಲ.

[ಗೊಂದಲ]

ಅಧ್ಯಕ್ಷರು:– ರೇವಣ್ಣನರೆ, ನೀವು ಸೇರಿಕೊಳ್ಳಿ, ನಿಮ್ಮ ವಿಚಾರವೇನು?

ಶ್ರೀ ಆರ್ ಅಶೋಕ್:– ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ, ನಿಲುವಳಿ ಸೂಚನೆ ಎಂದು ಹೇಳಿದ್ದೀರಿ, ನಿಲುವಳಿ ಸೂಚನೆಯ ಪ್ರಕಾರವೇ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ನೀವು ಚರ್ಚೆ ಶುರು ಮಾಡಿ.

ಶ್ರೀ ಜಗದೀಶ್ ಶೆಟ್ಟರ್:– ರೂಲ್ 60ರ ಅಡಿಯಲ್ಲಿ ನಾವು ಚರ್ಚೆ ಮಾಡುತ್ತೇವೆ. ಸರ್ಕಾರ ಇಷ್ಟೊಂದು adamant ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ, ನಾವು ರೂಲ್ 60 ಪ್ರಕಾರ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು:– ನಾನು ಹೇಳುವ ಒಂದು ಮಾತನ್ನು ಕೇಳಿ, ಇದು ಪ್ರಮುಖವಾದ ವಿಚಾರ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ, ರೂಲ್ 60 ಪ್ರಕಾರ ಇದು adjournment Motion ವ್ಯಾಪ್ತಿಗೆ ಬರುವುದಿಲ್ಲ, ಇತ್ತೀಚೆಗೆ ನಡೆದಂಥ ಘಟನೆ ಇದಲ್ಲ, ನಿಯಮ 69 ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ.

[ಗೊಂದಲ]

ಶ್ರೀ ಜಗದೀಶ್ ಶೆಟ್ಟರ್:– ರೂಲ್ 60 ಪ್ರಕಾರ ನಾವು ಚರ್ಚೆ ಮಾಡುತ್ತೇವೆ. ಇದು ಈ ಭಾಗದ ಜನರ ಜ್ವಲಂತ ಸಮಸ್ಯೆಯಾಗಿದೆ. ಇಲ್ಲಿ ಕಬ್ಬು ಬೆಳೆಗಾರರು ದೊಡ್ಡ ಪ್ರಮಾಣದಲ್ಲಿದ್ದಾರೆ.

ಶ್ರೀ ಆರ್. ಅಶೋಕ್:– ಬಿಜೆಪಿಯವರು ಮತ್ತು ರೈತ ಸಂಘದವರು ದೊಡ್ಡ ಪ್ರಮಾಣದಲ್ಲಿ ಹೋರಾಟ ಮಾಡುತ್ತಿದ್ದಾರೆ, ದಯವಿಟ್ಟು ನಿಯಮ 60 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಿ.

[ಗೊಂದಲ]

ಶ್ರೀ ಜಗದೀಶ್ ಶೆಟ್ಟರ್:– ರೂಲ್ 60 ಪ್ರಕಾರ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ನಾವು ನಿಲುವಳಿ ಸೂಚನೆಯ ಪ್ರಕಾರ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಸರ್ಕಾರ ಸುಮ್ಮನೆ ಇವತ್ತು ಮೊಂಡುತನ ಮಾಡುತ್ತಿದ್ದೆ. ಸರ್ಕಾರ ಇವತ್ತು ರೈತರ ಪರವಾದ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೂ ಅವಕಾಶ ಕೊಡುತ್ತಿಲ್ಲ, ಮೊಂಡುತನ ಮಾಡುತ್ತಿದೆ.

ಅಧ್ಯಕ್ಷರು:– ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನೀವು ಕೇಳಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಇಷ್ಟು ಹೊತ್ತಿಗೆ ಡಿಬೇಟ್ ಪ್ರಾರಂಭವಾಗುತ್ತಿತ್ತು, ಸರ್ಕಾರ ಏನು ಮೊಂಡುತನ ಮಾಡಿದರು, Question Hour ಇಲ್ಲ, ಈ ಡಿಬೇಟೂ ಇಲ್ಲ, ಈ ರೀತಿಯಾದ ಪರಿಸ್ಥಿತಿ.

ಅಧ್ಯಕ್ಷರು:– ಈಗ ಸದನವನ್ನು ಮುಂದೂಡಿ, ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರುವುದು.

[ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮಧ್ಯಾಹ್ನ 12 ಗಂಟೆ 45 ನಿಮಿಷಕ್ಕೆ ಮುಂದೂಡಲಾಯಿತು.]

ಸದನದ ಕಲಾಪವು 3 ಗಂಟೆ 22 ನಿಮಿಷಕ್ಕೆ ಪ್ರಾರಂಭವಾಯಿತು.

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ 60ರ ಪ್ರಕಾರ ಚರ್ಚೆಯಾಗಬೇಕು.

ಅಧ್ಯಕ್ಷರು:– ಈಗ ನಿಯಮ 69ರ ಪ್ರಕಾರ ಶುರು ಮಾಡಿ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ಕಬ್ಬು ಬೆಳೆಗಾರರಿಗೆ ಬೆಲೆ ನಿಗದಿ ಮಾಡುವ ಬಗ್ಗೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ 60 ಪ್ರಕಾರ ಚರ್ಚೆ ಮಾಡಬೇಕೆನ್ನುವುದು ನಮ್ಮ ಅಪೇಕ್ಷೆ ಇದೆ ಎಂದು ಹೇಳುತ್ತೇನೆ.

ಅಧ್ಯಕ್ಷರು:– ಜಗದೀಶ್ ಶೆಟ್ಟರ್‌ರವರೆ, ತಾವು ಈಗ ನಿಯಮ 69ರ ಪ್ರಕಾರ ಚರ್ಚೆಯನ್ನು ಪ್ರಾರಂಭ ಮಾಡಿ. ಈಗಾಗಲೇ ಅರ್ಧ ದಿವಸ ವ್ಯರ್ಥವಾಗಿದೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಾವು ಬೆಳಿಗ್ಗೆ ಕೂಡ ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೆವು. ಸರ್ಕಾರ ಸುಮ್ಮನೆ ಮೊಂಡುತನ ಮಾಡಿತು. ಈ ಸರ್ಕಾರ ಇಷ್ಟು ಮೊಂಡುತನ ಮಾಡದಿದ್ದರೆ, ಪ್ರತಿಷ್ಠೆ ಮಾಡದಿದ್ದರೆ ಚರ್ಚೆಯನ್ನು ಪ್ರಾರಂಭ ಮಾಡುತ್ತಿದ್ದೆವು. ಈಗ ತಾವು ಚರ್ಚೆಗೆ ಅವಕಾಶ ಮಾಡಿದ್ದೀರಿ. ನಮಗೆ ಯಾವುದೂ ಪ್ರತಿಷ್ಠೆ ಇಲ್ಲ. ಆದರೆ ಸರ್ಕಾರ ವಿನಾಕಾರಣ ಇಲ್ಲಿ ಪ್ರತಿಷ್ಠೆ ಮಾಡಿತು. ರೈತರ ಪರವಾಗಿ ಇರುವಂತಹ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ, ಈ ವಿಚಾರದ ಬಗ್ಗೆ ಚರ್ಚೆ ಮಾಡುತ್ತೇವೆಂದರೆ ಅದಕ್ಕೂ ಸರ್ಕಾರ ತಯಾರಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಇದು ಪ್ರತಿಷ್ಠೆ ಪ್ರಶ್ನೆ ಅಲ್ಲ. ಇವತ್ತು ಕಾನೂನಿನ ಪ್ರಶ್ನೆ ಇತ್ತು, rule ಪ್ರಶ್ನೆ ಇತ್ತು ಮತ್ತು bad precedent ಆಗಬಾರದು ಎಂದು ಆಗ ಹೇಳಿ ಇವರಿಗೆ ಚರ್ಚೆ ಪ್ರಾರಂಭ ಮಾಡಿ ಎಂದು ಹೇಳಿದೆವು.